(c) the number of persons gone in appeal against this levy;

(d) when the tank of Harnahalli was taken up for repairs of the main sluice (year) and the date of completion of repairs and servicing?

Sri S. B. NAGARAL (Minister for State for Minor Irrigation).—
(a) No irrigation cess is levied.

(b) This does not arise in view of reply to (a).

(c) This does not arise in view of reply to (a).

(d) Repairs to the main sluice was taken up during 1972 and completed in March 1972.

Sri H. S. SIDDAPPA.—I wish to make some correction in the question. Instead of "water rate" I had written as "water cess". This question may therefore be deferred.

Madam SPEAKER.—It cannot be deferred. If the .hon Member wants that information, he can put another question.

Sri H. S. SIDDAPPA.—All right, Madam, I have no supplementeries to this question.

UPPER TUNGA PROJECT

174. Sri S. M. SHEERANALY CHANDRASEKHAR (Hosanagar).—

Will the Chief Minister be pleased to state:—

(a) whether Government has noticed any adverse effect on Upper Tunga Project in Shimoga district due to the award passed on Krishna Water Dispute;

(b) whether the Government has realised the importance of the Upper Tunga Project;

(c) whether the Government is aware that the non-irrigated area in Shimoga and Honnali taluk and other areas in the State are mainly depending upon the Upper Tunga Project;

(d) whether the Government has any proposal to undertake this project during the year 1973-74;

(e) if not, whether the Government has made any alternative arrangement to irrigate these drought stricken or rainshadow belt area?

Sri H. M. CHANNABASAPPA (Minister for Public Works and Electricity) [on behalf of Sri D. DEVARAJ URS (Chief Minister)].—

(a) Yes.
(b) Yes.
(c) Yes.
(d) No.
(e) This is under study.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ; ಹಾಗಾದರೆ ಈ ತೊಂದರೆಯನ್ನು ಪರಿಹಾರ ಮಾಡಿಕೊಳ್ಳುವ ನಲು ವಾಗಿ ಏನಾದರೂ ಯೋಚನೆ ಮಾಡಿದ್ದೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣಾ ಜಲ ವಿವಾದದ ಬಗ್ಗೆ ನೀಡಿದ ತೀರ್ಪಿನಿಂದಾಗಿ ಈ ರೀತಿಯ ಉತ್ತರವನ್ನು ಕೊಡಲಾಗಿದೆ.

ಶ್ರೀ ಎಸ್.ಎಂ. ಶೀರನ್ನಾಳಿ ಚಂದ್ರಶೇಖರ್.—ಅದನ್ನು ಪರಿಹಾರ ಮಾಡಿಕೊಳ್ಳುವುದಕ್ಕಾಗಿ ಏನು ಯೋಚನೆ ಮಾಡಿದ್ದೀರಿ ?

ಶ್ರೀ ಎಚ್. ಎಂ. ಚನಬಸಪ್ಪ.—ಮುಂದೆ ಆ ಬಗ್ಗೆ ಒಂದು ಪ್ರಶ್ನೆ ಇದೆ. ಆಗ ತಮ್ಮ ಉಪ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತುಂಗಾ ಮೇಲ್ದಂಡೆ ಯೋಜನೆಯನ್ನು ಕೈಬಿಡುವ ಬಗ್ಗೆ ಅಂತಿಮ ತೀರ್ಮಾನ ಕೈಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ಹೆಚ್ಚಿಗೆ ಇದ್ದರೆ ಇದನ್ನು ತೆಗೆದುಕೊಳ್ಳುವುದಕ್ಕೆ ಅಡ್ಡಿಇಲ್ಲ; ಆದರೆ ಕೃಷ್ಣಾನದಿ ತೀರ್ಪಿನಪ್ರಕಾರ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ವಿಲ್ಲವೆಂದು ಕೈಬಿಟ್ಟಿದ್ದೇವೆ.

ಶ್ರೀ ಕೆ. ಯಂಕಟಪ್ಪ.—ಈ ಯೋಜನೆಯಿಂದ ಹೆಚ್ಚಿನ ಅನುಕೂಲ ಇರುವುದರಿಂದ ಮುಂದೆ ಹೆಚ್ಚು ನೀರು ಸಿಕ್ಕಿದರೆ ಈ ಯೋಜನೆಯನ್ನು ಕೈಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ನೀರು ಹೆಚ್ಚಿಗೆ ಬರುವ ಸಂದರ್ಭ ಒದಗಿದರೆ ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ಕೆ. ಎಸ್. ವೀರಪ್ಪಗೌಡ.—ಈ ಯೋಜನೆಯನ್ನು ಕೈಕೊಳ್ಳುವುದರಿಂದ ಒಳ್ಳೆಯ ಜಮೀನುಗಳು ಮುಳುಗಡೆಯಾಗುತ್ತವೆ ಎಂಬ ಕಾರಣದಿಂದ ಈ ಯೋಜನೆಯನ್ನು ಕೈಬಿಡಬೇಕು ಎಂದು ಕೆಲವರು ಹೇಳುತ್ತಿರುವುದರ ಜೊತೆಗೆ, ಈಗ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕೈಕೊಳ್ಳಬೇಕು ಎಂಬ ಉದ್ದೇಶ ಇರುವುದರಿಂದ, ಈ ಅಣೆಕಟ್ಟೆ ಕಟ್ಟುವುದನ್ನು ಹಿಂದಕ್ಕೆ ಹಾಕುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವರು ಆಗಬೇಕೆಂದು ಹೇಳುತ್ತಾರೆ, ಕೆಲವರು ಬೇಡ ಎಂದು ಹೇಳುತ್ತಾರೆ; ಆದರೆ ಮುಖ್ಯವಾದ ಪ್ರಶ್ನೆ ಅದಲ್ಲ; ಕೃಷ್ಣಾ ತೀರ್ಪಿನಿಂದ ನಮಗೆ ಸಾಕಷ್ಟು ನೀರು ಸಿಗುವುದಿಲ್ಲವಾದ್ದರಿಂದ ಈ ಯೋಜನೆಯನ್ನು ಕೈಬಿಡಲಾಗಿದೆ. ನೀರು ಸಿಗತಕ್ಕ ವ್ಯವಸ್ಥೆಯಾದರೆ ಆಗ ಇದನ್ನು ವಿಚಾರ ಮಾಡೋಣ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ಇದನ್ನು ಅಭ್ಯಸಿಸಲಾಗುತ್ತಿದೆ ಎಂದು ಹೇಳಿದ್ದೀರಿ; ಅಂದರೆ ಈ ಬಗ್ಗೆ ಏನು ಪ್ರಯೋಗ ಮಾಡು ತ್ತಿದ್ದೀರಿ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಎಷ್ಟರಮಟ್ಟಿಗೆ ಎಲ್ಲಿಂದ ನೀರನ್ನು ತಂದುಕೊಡಬಹುದು ಎಂಬುದನ್ನು ಅಭ್ಯಾಸ ಮಾಡಲಾಗುತ್ತಿದೆ.